■ ವಿಶಾಖ ಎನ್.



# ರಾಜಮೌಳಿ ಚಿತ್ರದ ಬಜೆಟ್ 1200 ಕೋಟಿ

ಸಿನಿಮಾ ಹಾಗೂ ಬಜೆಟ್ ವಿಸ್ತರಣೆ ಎಂಬ ವಿಷಯದ ಬಗ್ಗೆ ಈಗೀಗ ಚರ್ಚೆ ಕಾವು ಪಡೆದುಕೊಂಡಿದೆ. 'ಟಾಕ್ಸಿಕ್' ಸಿನಿಮಾ ಶೇಕಡಾ 60ರಷ್ಟು ಚಿತ್ರೀಕರಣ ಪೂರೈಸಲು 600 ಕೋಟಿ ರೂಪಾಯಿಗೂ ಹೆಚ್ಚು ವ್ಯಯ ಆದಮೇಲೆ ಕೆವಿಎನ್ ಪ್ರೊಡಕ್ಷನ್ಸ್ ಕೂಡ ಹುಬ್ಬೇರಿಸಿಕೊಂಡು ನಿಂತಿದೆ ಎಂಬ ಅರ್ಥದಲ್ಲಿ ವಿಶ್ಲೇಷಣೆಗಳು ಬರುತ್ತಿವೆ. ಇಂತಹ ಹೊತ್ತಲ್ಲಿ ನಿರ್ದೇಶಕ ರಾಜಮೌಳಿ ಬರೋಬ್ಬರಿ 1200 ಕೋಟಿ ರೂಪಾಯಿ ಬಜೆಟ್‌ನ ಚಿತ್ರ ನಿರ್ದೇಶಿಸುತ್ತಿರುವ ವರ್ತಮಾನ ಅನೇಕರ ಕಣ್ಣರಳಿಸಿದೆ. ಮಹೇಶ್ ಬಾಬು ಹಾಗೂ ಪ್ರಿಯಾಂಕಾ ಚೋಪ್ರಾ ಜೋಡಿಯಾಗಿ ಅಭಿನಯಿಸಿರುವ ಚಿತ್ರಕ್ಕೆ ಇನ್ನೂ ಹೆಸರಿಟ್ಟಿಲ್ಲ. ಸದ್ಯಕ್ಕೆ 'ಎಸ್‌ಎಸ್‌ಎಂಬಿ 29' ಎಂದು ಕರೆಯಲಾಗುತ್ತಿದೆ.

ಈ ಸಿನಿಮಾ ಬಜೆಟ್ ಎಷ್ಟು ಎಂದು ರಾಜಮೌಳಿ ಅವರಾಗಲೀ, ಚಿತ್ರತಂಡದ ಬೇರೆ ಯಾರಾಗಲೀ ಅಧಿಕೃತವಾಗಿ ಹೇಳಿಕೆ ನೀಡಿಲ್ಲ. ಆದರೆ, ಕೆನ್ಯಾದಲ್ಲಿ ಇತ್ತೀಚೆಗೆ ಚಿತ್ರೀಕರಣಕ್ಕಾಗಿ ಲೊಕೇಶನ್ ನೋಡಲು ತಂಡ ಭೇಟಿ ಕೊಟ್ಟಾಗ, ಅಲ್ಲಿನ 'ದಿ ಸ್ಟಾರ್' ಎಂಬ ವೆಬ್‌ಸೈಟ್ ಚಿತ್ರದ ಬಜೆಟ್ 1180 ಕೋಟಿ ರೂಪಾಯಿ ದಾಟಲಿದೆ ಎಂಬ ಮಾಹಿತಿ ಪ್ರಕಟಿಸಿತು. ಕೆನ್ಯಾದ ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿ ಮುಸಾಲಿಯಾ ಮುಡವಾಡಿ ಕೂಡ ಚಿತ್ರತಂಡದ ಜೊತೆ ಮಾತುಕತೆ ನಡೆಸಿದರು. 120 ದೇಶಗಳಲ್ಲಿ ಈ ಚಿತ್ರ ಬಿಡುಗಡೆಯಾಗಲಿದ್ದು, ಏಷ್ಯಾದ ಚಿತ್ರವೊಂದು ಇಂತಹ ದೊಡ್ಡ ಗುರಿ ಇಟ್ಟುಕೊಂಡಿರುವುದು ಶ್ಲಾಘನೀಯ ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕೆ.ಎಲ್. ನಾರಾಯಣ ಅವರು ಸಿನಿಮಾ ಬೇಡುವ ಬಜೆಟ್ ಅನ್ನು ಒದಗಿಸಲಿದ್ದು, ಎಂ.ಎಂ. ಕೀರವಾಣಿ ಸ್ವರ ಸಂಯೋಜನೆಯ ಕೆಲಸವನ್ನು ಆರಂಭಿಸಿದ್ದಾರೆ. ದುರ್ಗಾ ಆರ್ಟ್ಸ್ ಬ್ಯಾನರ್‌ನಲ್ಲಿ ತಯಾರಾಗಿರುವ ಚಿತ್ರದಲ್ಲಿ ಮಲೆಯಾಳಂ ನಟ ಪೃಥ್ವಿರಾಜ್ ಸುಕುಮಾರನ್ ಅವರೂ ಪ್ರಮುಖ ಪಾತ್ರದಲ್ಲಿ ಅಭಿನಯಿಸುವರು. ಮಸ್ಸೈ ಮರಾ, ಅಂಬೋಸೆಲಿ ತರಹದ ಪ್ರಕೃತಿ ಸೌಂದರ್ಯದ ಪ್ರದೇಶಗಳಲ್ಲಿ ರಾಜಮೌಳಿ ಸಿನಿಮಾ ಚಿತ್ರೀಕರಣ ನಡೆಸಲು ಉತ್ಸುಕರಾಗಿದ್ದಾರೆ. ಚಿತ್ರೀಕರಣಕ್ಕೆ ಬೇಕಾದ ಸಕಲ ರೀತಿಯ ನೆರವು ನೀಡಲು ಕೆನ್ಯಾ ಅಧಿಕಾರಿಗಳಿಂದ ಒಪ್ಪಿಗೆ ಪಡೆಯಲು ರಾಜಮೌಳಿ ಒಂದು ಸಭೆ ಕೂಡ ನಡೆಸಿದ್ದಾರೆ. ಒಡಿಶಾದ ಕೋರಾಪುಟ್ ಜಿಲ್ಲೆಯ ಪರ್ವತ ಶ್ರೇಣಿ ಪ್ರದೇಶಗಳಲ್ಲಿ ಈಗಾಗಲೇ ಕೆಲವು ದೃಶ್ಯಗಳ ಚಿತ್ರೀಕರಣವನ್ನು ಅವರು ಮುಗಿಸಿದ್ದಾರೆ ಎಂಬ ವರದಿಗಳಿವೆ. 2027ರಲ್ಲಿ ಚಿತ್ರವು ತೆರೆಕಾಣಲಿದ್ದು, ನಿರೀಕ್ಷೆಗೆ ಅದಾಗಲೇ ನಿರ್ದೇಶಕರು ರೆಕ್ಕೆಪುಕ್ಕ ಹಚ್ಚುತ್ತಿದ್ದಾರೆ. ■

# ಮತ್ತೆ ಅನುಷ್ಕಾ ಬಂದರು



'ಘಾಟಿ' ತೆಲುಗು ಸಿನಿಮಾ ಮೂಲಕ ಅನುಷ್ಕಾ ಶೆಟ್ಟಿ ಬೆಳ್ಳಿತೆರೆಯಲ್ಲಿ ಮತ್ತೆ ಕಾಣಿಸಿಕೊಂಡಿದ್ದಾರೆ. 'ಬಾಹುಬಲಿ' ಚಿತ್ರದ ಎರಡು ಭಾಗಗಳ ನಂತರ ಅವರು ಚಿತ್ರಗಳನ್ನು ಒಪ್ಪಿಕೊಂಡಿದ್ದೇ ಕಡಿಮೆ. ನಿರೀಕ್ಷೆಯ ಭಾರಕ್ಕೆ ಅವರು ನೇಪಥ್ಯಕ್ಕೆ ಸರಿದರೇನೋ ಎನ್ನುವ ಅನುಮಾನ ಮೂಡಿತ್ತು. ಆದರೆ, ನಿರ್ದೇಶಕ ಕ್ರಿಶ್ ಅವರನ್ನು ಮಹಿಳಾ ಪ್ರಧಾನ ಸಿನಿಮಾಗೆ ಕರೆತಂದಿದ್ದಾರೆ. ಆಂಧ್ರ ಪ್ರದೇಶದ ಗಡಿ ಭಾಗದ ಹೆಣ್ಣುಮಗಳೊಬ್ಬಳು ಅಪರಾಧಿ ಆಗುವ ಪರಿಸ್ಥಿತಿ ಉದ್ಭವ ಆಗುತ್ತದೆ. ಆ ಸ್ಥಿತಿಯಲ್ಲೇ ಅವಳು ಸಾಧಕಿಯೂ ಆಗಿ ಬೆಳೆಯುವ ಕಥನವನ್ನು ಘಾಟಿ ಚಿತ್ರ ಒಳಗೊಂಡಿದೆ.

ಸಾಮಾಜಿಕ ಮಾಧ್ಯಮದಿಂದ ದೂರವೇ ಉಳಿದಿರುವ ಅನುಷ್ಕಾ ತಮಗೆ ಚಿತ್ರಕಥೆ ಹಿಡಿಸಿದರಷ್ಟೇ ಪಾತ್ರಕ್ಕೆ ಒಪ್ಪುವುದಾಗಿ ಹೇಳಿದ್ದಾರೆ. ಘಾಟಿ ಚಿತ್ರೀಕರಣ ನಡೆಯುವ ಸಂದರ್ಭದಲ್ಲೇ ಅವರು ಒಂದು ಮಲೆಯಾಳಂ ಚಿತ್ರದ ಪಾತ್ರಕ್ಕೂ ಬಣ್ಣ ಹಚ್ಚಿದ್ದಾರೆ. ಅನುಷ್ಕಾ ಶೆಟ್ಟಿ ಎಲ್ಲಿ ಹೋದರು ಎಂದು ಸಾಮಾಜಿಕ ಮಾಧ್ಯಮದಲ್ಲಿ ನಡೆದ ಜಿಜ್ಞಾಸೆಯ ಅರಿವು ಅವರಿಗೆ ಇದೆ. ಹೊಸ ತಲೆಮಾರಿನವರು ತಮಗೆ ತೋಚಿದ್ದನ್ನು ಬರೆಯುವ, ಪೋಸ್ಟ್ ಮಾಡುವ ಗೀಳಿಗೆ ಬಿದ್ದಿರುವುದನ್ನು ಲಘುವಾಗಿಯೇ ಸ್ವೀಕರಿಸುವುದಾಗಿ ಅವರು ಹೇಳಿದ್ದು, ಮಾನಸಿಕ ನೆಮ್ಮದಿಯ ಕಾರಣಕ್ಕೆ ಸಾಮಾಜಿಕ ಮಾಧ್ಯಮದಿಂದ ದೂರ ಇರುವುದಾಗಿಯೂ ತಿಳಿಸಿದ್ದಾರೆ.

ವಿಕ್ರಮ್ ಪ್ರಭು, ಚೈತನ್ಯ ರಾವ್ ಕೂಡ ಅಭಿನಯಿಸಿರುವ 'ಘಾಟಿ' ಚಿತ್ರವು ತೆರೆಕಂಡಿದ್ದು, ಅನುಷ್ಕಾ ಅಭಿನಯಕ್ಕೆ ಮತ್ತೆ ಮೆಚ್ಚುಗೆ ವ್ಯಕ್ತವಾಗಿದೆ. ■